# ಶಿಕ್ಷಕ : ಬದಲಾವಣೆಯ ಹರಿಕಾರ

ಸ್ವಾಮಿ ನಿಖಿಲೇಶ್ವರಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

## ಶಕ್ತಿಯ ಸಂಚಾರ

ಸೋದರಿ ನಿವೇದಿತೆ ಹಾಗೂ ಇತರ ಮಹನೀಯರ ವ್ಯಕ್ತಿತ್ವಗಳು ಭಾರತದಲ್ಲಿ ಎಂತಹ ಶೈಕ್ಷಣಿಕ ಪ್ರಭಾವವನ್ನು ಬೀರಿದವು ಎಂಬುದನ್ನು ನೋಡಿದೆವು. ಮುಖ್ಯವಾದ ವಿಷಯವೆಂದರೆ ಬರೀ ಮಾದರಿಗಳಿದ್ದರೆ ಸಾಲದು. ಮಾದರಿಗಳಿಂದ ದೊರೆತ ಪರಿಹಾರಗಳು ಕಾರ್ಯಗತವಾಗಬೇಕು. ಒಮ್ಮೆ ಕಲ್ಕತ್ತದಲ್ಲಿ ಐವರು ಕುಡುಕರು ಸೇರಿ ಬಹಳ ಕುಡಿದುಬಿಟ್ಟಿದ್ದರು. ಆಗ ಮಧ್ಯರಾತ್ರಿಯಾಗಿತ್ತು. ಸ್ಮಶಾನಯಾತ್ರೆ ಮಾಡೋಣ ಎಂಬ ಹುಚ್ಚು ವಿಚಾರ ಅವರಿಗೆ ಹೊಳೆಯಿತು. ಒಬ್ಬನು ಮಂಚದ ಮೇಲೆ ಮಲಗಿದ. ಉಳಿದ ನಾಲ್ಕು ಜನ ಅವನನ್ನು ಹೊತ್ತುಕೊಂಡು ನಾಮಸಂಕೀರ್ತನೆ ಮಾಡುತ್ತ ಸ್ಮಶಾನಕ್ಕೆ ಹೊರಟಿದ್ದರು. ಕವಲುದಾರಿ ಬಂದಾಗ ಮುಂದೆ ಇದ್ದವರು ಒಂದು ಕಡೆಗೆ ಹಿಂದೆ ಇದ್ದವರು ಇನ್ನೊಂದು ಕಡೆಗೆ ಮಂಚವನ್ನು ಎಳೆಯಲು ಪ್ರಾರಂಭಿಸಿದರು. ಈ ಎಳೆದಾಟವನ್ನು ನೋಡಿ ಮಂಚದ ಮೇಲಿದ್ದ ಕುಡುಕ ಎದ್ದು "ಮೂರ್ಖರೇ, ನಿಮಗೆ ಈ ಊರಿಗಿರುವ ಒಂದು ಸ್ಮಶಾನದ ದಾರಿಯೂ ಗೊತ್ತಿಲ್ಲ. ನನಗೆ ಕೇವಡ್‌ತಲ ಹಾಗೂ ನೀಮ್‌ತಲ (ಕಲ್ಕತ್ತೆಯಲ್ಲಿನ ಎರಡು ಬಡಾವಣೆಗಳು) ಸ್ಮಶಾನದ ದಾರಿಗಳೂ ಗೊತ್ತಿವೆ. ಆದರೆ ನಾನು ದಾರಿ ತೋರಿಸುವ ಹಾಗಿಲ್ಲ, ಏಕೆಂದರೆ ನಾನು ಸತ್ತುಹೋಗಿರುವೆನಲ್ಲ?" ಎಂದನು. ನಮ್ಮ ಅವಸ್ಥೆಯು ಇದೇ ರೀತಿಯಾಗಿದೆ. ನಮಗೆ ಸಮಸ್ಯೆಗಳ ಪರಿಹಾರ ಗೊತ್ತಿದೆ. ಆದರೆ ಅದನ್ನು ಕಾರ್ಯಗತ ಮಾಡುತ್ತಿಲ್ಲ. ನಿದ್ದೆಹೋದವನನ್ನು ಸುಲಭವಾಗಿ ಎಚ್ಚರಿಸಬಹುದು. ಆದರೆ ನಿದ್ದೆ ಮಾಡುತ್ತಿರುವಂತೆ ನಟಿಸುತ್ತಿರುವವನ್ನು ಎಬ್ಬಿಸುವುದು ಹೇಗೆ? ಇದಕ್ಕೆ ಒಂದೇ ದಾರಿ ಎಂದರೆ ವಿದ್ಯುತ್ತಿನಂತಹ ಶಕ್ತಿಯ ಆಘಾತವನ್ನು ಕೊಡುವುದು. ಈ ಶಕ್ತಿಯು ವಿವೇಕಾನಂದರ ಕೃತಿಗಳನ್ನು ಓದುವುದರಿಂದ ಸಿಗುವುದು. "ಅವರ ಶಬ್ದಗಳು ಬೀಥೋವನ್ನಿನ ಶೈಲಿಯ ಪದಪುಂಜಗಳು. ಮೂವತ್ತು ವರ್ಷ ಹಿಂದೆ ಓದಿದ ಅವರ ಮಾತುಗಳು ನನ್ನ ದೇಹದಲ್ಲಿ ವಿದ್ಯುತ್ ಸಂಚಾರವನ್ನು ಉಂಟುಮಾಡಿವೆ" ಎಂದು ಫ್ರೆಂಚ್ ತತ್ವಜ್ಞಾನಿ ಹಾಗೂ ನೊಬೆಲ್ ಪುರಸ್ಕೃತ ರೋಮೇ ರೋಲಾ ಬರೆದಿದ್ದಾರೆ. ಅಮೆರಿಕ ಮತ್ತು ಇತರ ದೇಶಗಳಲ್ಲಿ ವಿವೇಕಾನಂದರು ನಾಲ್ಕು ವರ್ಷ ವೇದಾಂತ ಪ್ರಚಾರ ಮಾಡಿ ಭಾರತಕ್ಕೆ ಬಂದಾಗ ಬೃಹತ್ತಾದ ಸ್ವಾಗತ ಸಿಕ್ಕಿತು. ಅದಕ್ಕೆ ಉತ್ತರವಾಗಿ ವಿವೇಕಾನಂದರು ಜಡತ್ವದಿಂದ ಬಡಿದೆಬ್ಬಿಸುವ ಶಕ್ತಿ




ಯುತ ಭಾಷಣಗಳನ್ನು ಕೊಟ್ಟರು. ಅವುಗಳು 'ಕೊಲಂಬೊ ಇಂದ ಆಲ್ಮೋರಕೆ' ಎಂದು ಸಂಗ್ರಹರೂಪದಲ್ಲಿ ಪ್ರಕಟಗೊಂಡಿವೆ. 'ಸನಾತನ ಭಾರತ', 'ಭವ್ಯಭಾರತ ನಿರ್ಮಾಣ', 'ರಾಷ್ಟ್ರ ಜಾಗೃತಿ' ಎಂಬ ಸುಂದರ ಪುಸ್ತಕಗಳಲ್ಲಿ ಅವರ ಸ್ಫೂರ್ತಿದಾಯಕ ಭಾಷಣಗಳಿವೆ. ಕಟಕ್‌ನ ಒಬ್ಬ ಒಂಬತ್ತನೆ ತರಗತಿಯ ವಿದ್ಯಾರ್ಥಿ ವಿವೇಕಾನಂದರ ಪುಸ್ತಕಗಳನ್ನು ಓದಿ, ಪ್ರಭಾವಿತನಾಗಿ, ರಾಷ್ಟ್ರದ ಉನ್ನತಿಗಾಗಿ ತನ್ನನ್ನು ಸಮರ್ಪಿಸಿಕೊಳ್ಳಲು ನಿಶ್ಚಯಿಸಿದ. ಆತನೆ ನಂತರ ನೇತಾಜಿ ಸುಭಾಷ್ ಚಂದ್ರ ಬೋಸ್ ಎಂದು ಪ್ರಸಿದ್ಧನಾದ. ಡಾ. ಎಸ್. ರಾಧಾಕೃಷ್ಣನ್ ತಮ್ಮ ಸ್ನೇಹಿತರಿಗೆ ಪತ್ರ ಬರೆಯುವಾಗ ಸ್ವಾಮಿ ವಿವೇಕಾನಂದರ ವಿಚಾರಗಳನ್ನು ಉಲ್ಲೇಖಿಸುತ್ತಿದ್ದರು. ಆಗಿನ ಕಾಲದಲ್ಲಿ ವಿವೇಕಾನಂದರ ಪುಸ್ತಕವನ್ನು ಓದುವವರನ್ನು ಬ್ರಿಟಿಷ್ ಸರ್ಕಾರವು ಸಂದೇಹಾಸ್ಪದ ದೃಷ್ಟಿಯಲ್ಲಿ ನೋಡುತ್ತಿದ್ದು, ಪ್ರತಿಯೊಂದು ಕ್ರಾಂತಿಕಾರಿಯ ಮನೆಯಲ್ಲೂ ಬಾಂಬ್‌ಗಿಂತ ಬಹಳ ಶಕ್ತಿಯುತವಾದ ಸ್ಫೋಟಕ ವಸ್ತುಗಳು ಪೋಲಿಸರಿಗೆ ಸಿಗುತ್ತಿತ್ತು! ಅದೇನೆಂದರೆ ವಿವೇಕಾನಂದರ ಪುಸ್ತಕಗಳು! ವಿವೇಕಾನಂದರ ಸಾಹಿತ್ಯವನ್ನು ಬಹಿಷ್ಕರಿಸಲು ಬ್ರಿಟಿಷ್ ಸರ್ಕಾರ ಶಿಫಾರಸು ಮಾಡಿತ್ತು. ತಮ್ಮ ಕಾಲದಲ್ಲಿ ವಿವೇಕಾನಂದರ ಪುಸ್ತಕಗಳಿಂದ ಪ್ರಭಾವಿತನಾಗದ ಒಬ್ಬನೇ ಒಬ್ಬ ತರುಣನೂ ಇರಲಿಲ್ಲ ಎಂದು ಪಂಡಿತ್ ನೆಹರೂ ಹೇಳಿದ್ದಾರೆ.

೩೦.೧.೧೯೨೧ರಂದು ಮಹಾತ್ಮ ಗಾಂಧೀಜಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕೇಂದ್ರವಾದ ಬೇಲೂರು ಮಠಕ್ಕೆ ಬಂದಿದ್ದರು. ಭಾಷಣ ಮಾಡಲು ಕೇಳಿಕೊಂಡಾಗ "ಇಲ್ಲಿಗೆ ನಾನು ವಿವೇಕಾನಂದರಿಗೆ ಗೌರವ ಸಲ್ಲಿಸಲು ಬಂದಿದ್ದೇನೆ; ಭಾಷಣ ಮಾಡಲು ಬಂದಿಲ್ಲ. ಇಲ್ಲಿ ನೆರೆದಿರುವ ಯುವಕರಿಗೆ ಒಂದು ಕಿವಿಮಾತು ಹೇಳುತ್ತೇನೆ, ಇಲ್ಲಿಂದ ಬರಿಯ ಕೈಯಲ್ಲಿ ಹಿಂದಿರುಗಿ ಹೋಗಬೇಡಿ. ಮಹತ್ತಾದ ಈ

ಜಾಗದಿಂದ ಸ್ವಲ್ಪ ಸ್ಫೂರ್ತಿಯನ್ನು ಪಡೆದುಕೊಂಡು ಹೋಗಿ. ವಿವೇಕಾನಂದರ ಕೃತಿಗಳನ್ನು ಓದಿ. ನಾನು ಸ್ವತಃ ಅವುಗಳನ್ನು ಓದಿದ್ದರಿಂದ ನನ್ನ ದೇಶಪ್ರೇಮ ಸಾವಿರ ಪಟ್ಟು ಹೆಚ್ಚಾಯಿತು" ಎಂದು ತಿಳಿಸಿದರು. ಸ್ವಾಮಿ ವಿವೇಕಾನಂದರ ಕೃತಿಗಳು ವಿದ್ಯುತ್ ಆಘಾತದಂತೆ ಕೆಲಸಮಾಡಿ ಶಿಕ್ಷಕರನ್ನು ಜಾಗೃತಗೊಳಿಸಿ ತಾವು ಪರಿವರ್ತನೆಯ ಹರಿಕಾರರು ಎಂಬುದನ್ನು ಅವರಿಗೆ ಜ್ಞಾಪಿಸುತ್ತದೆ. ವ್ಯಾಪಾರಿಗಳು, ಮಂತ್ರಿಗಳು, ಅಧಿಕಾರಿಗಳು ಬೇಕಾದರೆ ಹಣದ ಹಿಂದೆ ಬಿದ್ದು, ಮೌಲ್ಯಗಳನ್ನು ಕಡೆಗಣಿಸಿದರೂ ಅವರನ್ನು ಕ್ಷಮಿಸಬಹುದು. ಆದರೆ ಶಿಕ್ಷಕರು ಆ ಮಾರ್ಗ ಹಿಡಿದರೆ ಅದು ಅಕ್ಷಮ್ಯ. ಏಕೆಂದರೆ ಅವರ ಉದಾಹರಣೆಯಿಂದ ಸಾವಿರಾರು ವಿದ್ಯಾರ್ಥಿಗಳು ತೊಂದರೆಗೀಡಾಗುತ್ತಾರೆ! "ಆಗು ಮತ್ತು ಆಗಿಸು" (Be and make) ಎಂಬ ಸ್ವಾಮಿ ವಿವೇಕಾನಂದರ ಮಂತ್ರದ ಪ್ರಕಾರ ಅವರು ಮೊದಲು ತಮ್ಮ ಶೀಲವನ್ನು ಬೆಳೆಸಿಕೊಂಡು ಅನಂತರ ಇತರರಿಗೆ ಶೀಲವನ್ನು ಬೆಳೆಸಿಕೊಳ್ಳಲು ಸಹಾಯ ಮಾಡಬೇಕು. ಶಿಕ್ಷಕರ ಪ್ರಭಾವದಿಂದ ವಿದ್ಯಾರ್ಥಿಗಳು ಉತ್ತಮ ಗುಣವಂತರಾಗಬಹುದು ಅಥವಾ ರಾಕ್ಷಸೀ ಪ್ರವೃತ್ತಿಯವರಾಗಬಹುದು. ವಿದ್ಯಾರ್ಥಿಗಳಿಗೆ ಪಾಠ ಮಾಡುವುದಕ್ಕಿಂತಲೂ ನಾವು ಏನಾಗಿದ್ದೇವೆ ಎಂಬುದು ಮುಖ್ಯ. ಕಲಿಕೆಯಿಂದಷ್ಟೇ ಮೌಲ್ಯಗಳು ಬರುವುದಿಲ್ಲ. ಅವುಗಳನ್ನು ಅಭ್ಯಾಸದಿಂದ ಕರಗತ ಮಾಡಿಕೊಳ್ಳಬೇಕು. ಈಗಿನ ವಿದ್ಯಾರ್ಥಿಗಳು ಬುದ್ಧಿವಂತರು. ತಮ್ಮ ಶಿಕ್ಷಕರನ್ನು ಚೆನ್ನಾಗಿ ಬಲ್ಲರು. ಹಾಗೂ ಶಾಲೆ ಬಿಟ್ಟ ನಂತರ ಉಪಾಧ್ಯಾಯರು ಏನು ಮಾಡುತ್ತಾರೆ ಎಂಬುದೂ ವಿದ್ಯಾರ್ಥಿಗಳಿಗೆ ಗೊತ್ತು. ಅವರಿಗೆ "ನೀವು ಸತ್ಯವನ್ನೇ ಸದಾ ಹೇಳಿ" ಎಂದು ಉಪದೇಶಿಸುತ್ತ, ನೀವೇ ಅದನ್ನು ಪಾಲಿಸದಿದ್ದರೆ, ಆ ಉಪದೇಶದಿಂದ ಯಾವ ಪರಿಣಾಮವೂ ಇರುವುದಿಲ್ಲ.

ಈ ಕಥೆಯನ್ನು ನೀವು ಬಹುಶಃ ಕೇಳಿರಬಹುದು: ಕೆಲವು ಮಕ್ಕಳು ಆಟವಾಡುತ್ತಿದ್ದರು. ಆ ಕಡೆಯೇ ಹೋಗುತ್ತಿದ್ದ ಒಬ್ಬ ಶಿಕ್ಷಕ ನೀವು ಏನು ಮಾಡುತ್ತಿದ್ದೀರೆಂದು ಕೇಳಿದ. ನಮ್ಮ ಈ ಆಟದಲ್ಲಿ ಯಾರು ದೊಡ್ಡ ಸುಳ್ಳನ್ನು ಹೇಳುತ್ತಾರೋ ಅವರಿಗೆ ಬಹುಮಾನ ಎಂದು ಮಕ್ಕಳು ತಿಳಿಸಿದರು. "ಇಂತಹ ಆಟ ಆಡಬೇಡಿ ಮತ್ತು ಯಾವಾಗಲೂ ಸತ್ಯವನ್ನೇ ನುಡಿಯಿರಿ. ನಾನು ಇಡೀ ಜೀವನದಲ್ಲಿ ಒಂದು ಸುಳ್ಳೂ ಹೇಳಿಲ್ಲ" ಎಂದು ಆ ಶಿಕ್ಷಕ ಹೇಳಿದ. ಅವನ ಮಾತುಗಳನ್ನು ಕೇಳಿ ಆ ಮಕ್ಕಳೆಲ್ಲ ಚಪ್ಪಾಳೆ ತಟ್ಟಿ ಗಟ್ಟಿಯಾಗಿ "ಸರ್, ನಿಮಗೆ ಮೊದಲನೆ ಬಹುಮಾನ ಕೊಡಬೇಕು!" ಎಂದು ಹೇಳಿದರು. ನಮ್ಮ ಆಚರಣೆ, ನಡತೆಗಳೇ ಮುಖ್ಯವೇ ವಿನಾ ನಾವು ಆಡುವ ಮಾತುಗಳಲ್ಲ.

**ಶಿಕ್ಷಕನ ಯಶಸ್ಸಿನ ಮಂತ್ರ**

ನಾನು ಶಿಕ್ಷಕರ ಜೊತೆ ಮಾತನಾಡುವಾಗ ಅವರಿಗೆ ಈ ಕೆಳಕಂಡ ಯಶಸ್ಸಿನ ಶತ್ರವನ್ನು (FORMULA) ಕೊಡುತ್ತೇನೆ:

**S = 3D + 3Q.**

ಇಲ್ಲಿ S = (Success in teaching life) ಉಪಾಧ್ಯಾಯನಾಗಿ ಯಶಸ್ಸು; 3D = (Dignity, Dedication and Devotion) ಘನತೆ, ನಿಷ್ಠೆ ಹಾಗೂ ತತ್ಪರತೆ; 3Q ಅಂದರೆ IQ (Intelligence Quotient) ಬೌದ್ಧಿಕ ಆಯಾಮ, EQ (Emotional Quotient) ಭಾವನಾತ್ಮಕ ಆಯಾಮ ಹಾಗೂ SQ (Spiritual Quotient) ಆಧ್ಯಾತ್ಮಿಕ ಆಯಾಮ. 'ನಾನು ಒಬ್ಬ ಶಿಕ್ಷಕ' ಎಂಬ ಮಂತ್ರವನ್ನು ಪ್ರತಿನಿತ್ಯ ಹತ್ತು ಬಾರಿ ಉಚ್ಚಾರಣೆ ಮಾಡಲು ಶಿಕ್ಷಕರಿಗೆ ಹೇಳುತ್ತೇನೆ. ಇದು ಸರಳವೆಂಬಂತೆ ಕಾಣಿಸಿದರೂ ಇದನ್ನು ಹೇಳುವ ರೀತಿಯಲ್ಲಿ ವ್ಯತ್ಯಾಸವಿದೆ. ನಾನು ಶಿಕ್ಷಕರನ್ನು 'ನೀವೇನು ಮಾಡುತ್ತೀರಿ?' ಎಂದು ಕೇಳಿದಾಗ ಅವರು ಅಳುಮೋರೆ ಹಾಕಿಕೊಂಡು 'ನಾನು ಶಿಕ್ಷಕ' ಎಂದು ಹೇಳುತ್ತಾರೆ. ಅವರು ಆಸಕ್ತಿಯಿಲ್ಲದೆ, ಬೇರೆ ಮಾರ್ಗವಿಲ್ಲದೆ, ಬಲವಂತರಾಗಿ ಶಿಕ್ಷಕರಾಗಿದ್ದಾರೆ ಎಂದು ಗೊತ್ತಾಗುತ್ತದೆ. "ನಾನು ಶಿಕ್ಷಕ, ನಾನು ರಾಷ್ಟ್ರ ನಿರ್ಮಾಪಕ, ಪರಿವರ್ತನೆಯ ಹರಿಕಾರ, ಜವಾಬ್ದಾರಿಯುಳ್ಳ ಮಹಾವ್ಯಕ್ತಿ" ಎಂದು ಹೆಮ್ಮೆಯಿಂದ, ಆತ್ಮವಿಶ್ವಾಸದಿಂದ ಹೇಳಿಕೊಳ್ಳುವ ಶಿಕ್ಷಕರಿರಬೇಕು. ನನ್ನ ಮಟ್ಟಿಗೆ ಪ್ರಪಂಚದಲ್ಲಿ ಅತಿ ದೊಡ್ಡ ಮತ್ತು ಮಹತ್ವಪೂರ್ಣ ಉದ್ಯೋಗ ಎಂದರೆ ಶಿಕ್ಷಕರದು. ರಾಷ್ಟ್ರದ ಭವಿಷ್ಯವು ಮಂತ್ರಿಗಳ, ವಿಜ್ಞಾನಿಗಳ, ಐ.ಎ.ಎಸ್. ಅಧಿಕಾರಿಗಳನ್ನು ಆಧರಿಸಿಲ್ಲ. ಅದು ಶಿಕ್ಷಕರ ನಿಷ್ಠಾವಂತ ಕಾರ್ಯದಕ್ಷತೆಯ ಮೇಲೆ ನಿಂತಿದೆ. ಏಕೆಂದರೆ ಅವರು ಮಂತ್ರಿಗಳ, ವಿಜ್ಞಾನಿಗಳ, ಅಧಿಕಾರಿಗಳ ಭವಿಷ್ಯವನ್ನು ರೂಪಿಸುತ್ತಾರೆ. ಮನುಷ್ಯನಲ್ಲಿರುವ ದೈವತ್ವವನ್ನು ರೂಪಿಸುವ ಶಿಕ್ಷಕರು ಕರ್ಮಯೋಗದ ಅನುಷ್ಠಾನದಲ್ಲಿ ಪರಿಣತಿಯನ್ನು ಹೊಂದಬಲ್ಲರು. "ನಾನು ಶಿಕ್ಷಕ. ನನ್ನ ಮೇಲೆ ಮಹತ್ವಪೂರ್ಣ ಜವಾಬ್ದಾರಿ ಇದೆ. ರಾಷ್ಟ್ರದ ಹಿತಕ್ಕೆ ನನ್ನ ಕೊಡುಗೆಯಿದೆ" ಎಂಬ ಮಂತ್ರವನ್ನು ನಿತ್ಯವೂ ಶಿಕ್ಷಕನು ಪಠಿಸಬೇಕು.

ಶಿಕ್ಷಕರು ಪರಿವರ್ತನೆಯ ಹರಿಕಾರರಾಗಬೇಕು. ಏಕೆಂದರೆ, ಭಾರತವು ಉಳಿದರೆ ಇಡೀ ವಿಶ್ವ ಉಳಿಯುತ್ತದೆ. ಅಧ್ಯಾತ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಕಾಪಾಡುವುದೇ ಅಲ್ಲದೆ ಕಾಲಕಾಲಕ್ಕೂ ಅದನ್ನು ಎಲ್ಲೆಡೆ ನೀಡುವಲ್ಲಿ ಭಾರತದ ಪಾತ್ರ ಮಹತ್ವದ್ದು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಪ್ರಜ್ಞಾವಂತ ನಾಗರಿಕರಾಗಿ ರೂಪುಗೊಳಿಸಬೇಕು. ಅಂಥ ಕೆಲಸ ವಿದ್ಯೆಯ ಮೂಲಕ ಬರಬೇಕೇ ಹೊರತು ಕಾರ್ಖಾನೆಗಳಿಂದ ಅಲ್ಲ ಎಂದು ಪ್ರಸಿದ್ಧ ಚಿಂತಕರಾದ ನಾನಿ ಪಾಲ್ಖೀವಾಲ ತಿಳಿಸಿದ್ದಾರೆ. ಈ ರೀತಿಯಲ್ಲಿ ಶಿಕ್ಷಕರು ರಾಷ್ಟ್ರದ, ಜಗತ್ತಿನ ಪರಿವರ್ತನೆಗೆ ಕಾರಣಕರ್ತರಾಗಬೇಕು. "ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ವಿವೇಕಾನಂದರ ಧೀರವಾಣಿಯನ್ನು ನಮ್ಮ ಶಿಕ್ಷಕರು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು.